ಸಂದರ್ಭದಲ್ಲಿ ಸುಡುಮದ್ದಿನ ವಿಷ, ತೇವಾಂಶಯುಕ್ತ ಗಾಳಿಯಲ್ಲಿ ಸೇರಿಕೊಂಡು ಎಲ್ಲೆಡೆಯೂ ಪಸರಿಸುತ್ತದೆ. ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ದೀಪಾವಳಿಯ ನಂತರ ಹಲವು ಮಂದಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಕಾರಣ ವಾಯುಮಾಲಿನ್ಯ ಎಂದು ವೈದ್ಯರೂ ಹೇಳುತ್ತಾರೆ. ಇಂತಹ ಅನೇಕ ಉದಾಹರಣೆಗಳು, ಅಧ್ಯಯನಗಳೊಂದಿಗೆ ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್– ಎನ್‌ಇಇಆರ್‌ಐ) ಸಂಶೋಧನಾ ವರದಿಯನ್ನೂ ನೀಡಿದೆ.

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯದ ಸಮಸ್ಯೆ, ಅದರ ಪರಿಣಾಮದ ಬಗ್ಗೆ ಹಲವು ವರ್ಷಗಳಿಂದ ಇಡೀ ವಿಶ್ವಕ್ಕೇ ಅರಿವಾಗುತ್ತಿದೆ. ಈ ಎಲ್ಲ ದುಷ್ಪರಿಣಾಮಗಳನ್ನು ಅರಿತ ಸುಪ್ರೀಂ ಕೋರ್ಟ್ ರಾಸಾಯನಿಕಯುಕ್ತ ಪಟಾಕಿಗಳನ್ನು ನಿಷೇಧಿಸಿದೆ. 'ಹಸಿರು ಪಟಾಕಿ'ಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಮಾತ್ರ ಅವಕಾಶ ಕಲ್ಪಿಸಿ ಆದೇಶಿಸಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯೂ (ಎನ್‌ಜಿಟಿ) ನಗರಗಳಲ್ಲಿ ವಾಯು ಮಾಲಿನ್ಯವನ್ನು ಕಾಪಾಡಿಕೊಳ್ಳಲು ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಎಂದು ಸೂಚಿಸಿದೆ. ಅದರಂತೆ, ಕಳೆದ ನಾಲ್ಕೈದು ವರ್ಷಗಳಿಂದ ರಾಸಾಯನಿಕ ಪಟಾಕಿಗಳ ಉತ್ಪಾದನೆ, ಮಾರಾಟ ನಿಷೇಧಿಸಲಾಗಿದೆ. 'ಹಸಿರು ಪಟಾಕಿ'ಗೆ ಆದ್ಯತೆ ನೀಡಲಾಗಿದೆ. ಹೀಗೆ, ಮಾಲಿನ್ಯವನ್ನು ತಡೆಯಲು ಸಾಂಪ್ರದಾಯಿಕ ಪಟಾಕಿಗಳ ಬದಲಾಗಿ ಬಂದಿರುವ ಹಸಿರು ಪಟಾಕಿಗಳು ಮಾಲಿನ್ಯವನ್ನೇ ಮಾಡುವುದಿಲ್ಲ? ಈ ಪ್ರಶ್ನೆಗೆ ಉತ್ತರ, 'ಶೇ 30ರಷ್ಟು ಇಲ್ಲ' ಎಂದಷ್ಟೇ ಹೇಳಲು ಸಾಧ್ಯ.

'ಹಸಿರು ಪಟಾಕಿ' ಹೆಸರಿಗಷ್ಟೇ ಹಸಿರು. ಪರಿಸರದ ತಾಜಾತನ ಉಳಿಸುವಲ್ಲಿ ಅದರ ಪಾತ್ರ ದೊಡ್ಡದೇನೂ ಇಲ್ಲ. ಸಾಂಪ್ರದಾಯಿಕ– ರಾಸಾಯನಿಕ ಪಟಾಕಿಗಳಿಗಿಂತ ಶೇ 30ರಷ್ಟು ಕಡಿಮೆ ಮಾಲಿನ್ಯವನ್ನು ವಾತಾವರಣಕ್ಕೆ ಬಿಡುತ್ತವೆ. ಹಾನಿಕಾರಕ ರಾಸಾಯನಿಕವನ್ನು ಹೊಂದಿರದ 'ಹಸಿರು ಪಟಾಕಿ' ವಾಯುಮಾಲಿನ್ಯವನ್ನು ಕಡಿಮೆ ಮಾಡುತ್ತದೆ, ಇದು ಪರಿಸರ–ಸ್ನೇಹಿ ಎಂದೆಲ್ಲ ಹೇಳಲಾಗುತ್ತದೆ. ಹೂಕುಂಡ, ಪೆನ್ಸಿಲ್, ಸುರ್‌ಸುರ್ ಬತ್ತಿ, ಮಾರೂನ್ಸ್, ಬಾಂಬ್ ಮತ್ತು ಭೂ–ಚಕ್ರಗಳ ಉತ್ಪನ್ನಗಳನ್ನು ಒಳಗೊಂಡಿರುವ 'ಹಸಿರು ಪಟಾಕಿ', ಥರ್ಮೈಟ್ ಮತ್ತು ಅಲ್ಯುಮಿನಿಯಂ ಅನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿರುತ್ತದೆ. ಇಷ್ಟೆಲ್ಲ ನಿಯಂತ್ರಣಗಳಿದ್ದರೂ ವಾಯು ಮಾಲಿನ್ಯದ ಮೇಲಾಗುವ ದುಷ್ಪರಿಣಾಮ ಶೇ 30ರಷ್ಟು ಮಾತ್ರ ಕಡಿಮೆಯಾಗುತ್ತದೆ.

'ಹಸಿರು ಪಟಾಕಿ'ಯನ್ನು ಎಲ್ಲರೂ ತಯಾರಿಸುವಂತಿಲ್ಲ. ಸಿಎಸ್‌ಐಆರ್– ಎನ್‌ಇಇಆರ್‌ಐಯಿಂದ ಮಾನ್ಯತೆ ಹೊಂದಿರುವ ಕಂಪನಿಗಳು ಮಾತ್ರ ಉತ್ಪಾದನೆ ಮಾಡಬೇಕು. ಸಿಎಸ್‌ಐಆರ್– ಎನ್‌ಇಇಆರ್‌ಐ ನೀಡುವ ಪ್ರಮಾಣಪತ್ರದ ಲೋಗೊವನ್ನು 'ಹಸಿರು ಪಟಾಕಿ' ಪ್ಯಾಕೆಟ್ ಮೇಲೆ ಪ್ರಕಟಿಸಬೇಕು. ಈ ಲೋಗೊದಿಂದ ನಾಗರಿಕರು ಅದನ್ನು 'ಹಸಿರು ಪಟಾಕಿ' ಎಂದು ತಿಳಿಯಬಹುದು. ಇದಲ್ಲದೆ, ಕ್ಯೂಆರ್ ಕೋಡ್ ಅನ್ನೂ ಮುದ್ರಿಸಬೇಕು. ಅದನ್ನು ಸ್ಕ್ಯಾನ್ ಮಾಡಿದರೆ, 'ಹಸಿರು ಪಟಾಕಿ'ಯ ಹೆಸರು, ಶಬ್ದದ ಪ್ರಮಾಣ, ಮಾಲಿನ್ಯದ ಪ್ರಮಾಣ, ಉತ್ಪಾದನೆ ದಿನಾಂಕ, ಬ್ಯಾಚ್, ಸಂಸ್ಥೆಯ ಹೆಸರು ಎಲ್ಲವೂ ಲಭ್ಯವಾಗುತ್ತದೆ. ಶೇ 30ರಷ್ಟು ಮಾಲಿನ್ಯವನ್ನು ಕಡಿಮೆ ಮಾಡುತ್ತದೆ ಎಂಬುದೂ ಇದರಲ್ಲೇ ನಮೂದಾಗಿರುತ್ತದೆ.

## ಶಬ್ದಕ್ಕೂ ಇಲ್ಲ ಕಡಿವಾಣ

ವಾಯುಮಾಲಿನ್ಯವನ್ನು ಶೇ 30ರಷ್ಟು ಕಡಿಮೆ ಮಾಡುವ 'ಹಸಿರು ಪಟಾಕಿ' ಶಬ್ದಮಾಲಿನ್ಯಕ್ಕೆ ನೀಡುವ ಕೊಡುಗೆ ಏನು ಎಂಬುದನ್ನು ನೋಡುವುದಾದರೆ, ಅದರಲ್ಲೂ ಭಾರಿ ಹೆಚ್ಚೇನೂ ಇಲ್ಲ ಎಂಬುದು ಸಾಬೀತಾಗುತ್ತದೆ. ರಾಸಾಯನಿಕ ಪಟಾಕಿಗಳು 160 ಡೆಸಿಬಲ್ ಶಬ್ದವನ್ನು ಉಂಟು ಮಾಡಿದರೆ 'ಹಸಿರು ಪಟಾಕಿ' ಸುಮಾರು 125 ಡೆಸಿಬಲ್ ಶಬ್ದ ಮಾಡುತ್ತದೆ. ನಿಮಗೆ ಗೊತ್ತಿರಲಿ, ಮನುಷ್ಯನ ಕಿವಿಗೆ 70 ಡೆಸಿಬಲ್‌ವರೆಗಿನ ಶಬ್ದ ಆಹ್ಲಾದಕರ. 85 ಡೆಸಿಬಲ್‌ಗಿಂತ ಹೆಚ್ಚಿನ ಶಬ್ದ, ಕಿವಿ ಕೇಳದಂತೆಯೇ ಮಾಡಬಹುದು. ಗುಡುಗು 120 ಡೆಸಿಬಲ್, ಜೆಟ್ ಪ್ಲೇನ್ 130 ಡೆಸಿಬಲ್, ಗನ್ ಶಬ್ದ 160 ಡೆಸಿಬಲ್. ಈ ಮಾಪನಗಳಿಂದ ಪಟಾಕಿಗಳ ಶಬ್ದಮಾಲಿನ್ಯ ಯಾವ ಮಟ್ಟದಲ್ಲಿದೆ ಎಂಬುದನ್ನು ಅರಿತುಕೊಳ್ಳಬಹುದು.

ಈ ಎಲ್ಲ ಉದಾಹರಣೆಗಳು ರಾಸಾಯನಿಕವಾಗಲಿ, ಹಸಿರು ಪಟಾಕಿಯಾಗಲಿ, ಎಲ್ಲವೂ ಮನುಷ್ಯನ ಆರೋಗ್ಯಕ್ಕೆ ಮಾರಕ ಎಂಬುದನ್ನೇ ಸಾಬೀತುಪಡಿಸುತ್ತವೆ. ಇದನ್ನು ಗಮನದಲ್ಲಿಟ್ಟುಕೊಂಡು ಹಲವು ವರ್ಷಗಳಿಂದ ಪಟಾಕಿಗೆ ಬೆಂಕಿ ಸೋಕದಂತೆ ದೂರ ಉಳಿದವರಿದ್ದಾರೆ. ಆದರೆ, ಇಂತಹವರ ಸಂಖ್ಯೆ ಪಟಾಕಿ ಇಲ್ಲವೆಂದರೆ ದೀಪಾವಳಿ ಹಬ್ಬದ ಸಂಭ್ರಮವೇ ಇಲ್ಲವೆಂಬುವವರ ಸಂಖ್ಯೆಯ ಪ್ರಮಾಣಕ್ಕಿಂತ ಸಾಕಷ್ಟು ಪಟ್ಟು ಕಡಿಮೆ ಇದೆ. ಆದ್ದರಿಂದಲೇ ದೀಪಾವಳಿಯ ಸಂದರ್ಭದಲ್ಲಿ ಪಟಾಕಿ ಹಸಿರಾದರೂ, ಮಾಲಿನ್ಯದ ಗಾಢ ಕಪ್ಪು ತಿಳಿಯಾಗಿಲ್ಲ. ಕಿವಿಗೆ ಹಾನಿಕಾರಕವಾಗಿರುವ ಶಬ್ದ ಮಾಲಿನ್ಯದ ಅಬ್ಬರಕ್ಕೆ ನಿಯಂತ್ರಣ ಬಿದ್ದಿಲ್ಲ. ವೈಯಕ್ತಿಕ ಆಯ್ಕೆಯಾಗಿರುವ ಸಿಡಿಮದ್ದಿನ ಸ್ಫೋಟ ಪರಿಸರ ಮೇಲಿನ ಆಸ್ಫೋಟವಾಗಿದೆ. ಹಸಿರು, ನೀರಿಗೆ ಆ ಜ್ವಾಲಾಮುಖಿಯ ವಿಷ ಸೇರಿಕೊಂಡು ಮನುಷ್ಯರ ಆರೋಗ್ಯದ ಮೇಲೆ ದಟ್ಟಕಾರ್ಮೋಡವನ್ನು ಸೃಷ್ಟಿಮಾಡಿದೆ.

'ಇದೆಲ್ಲದ್ದಕ್ಕೂ ಪರಿಹಾರವಿದೆ' ಎನ್ನುತ್ತದೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ. 'ಹಸಿರು ಪಟಾಕಿ'ಗಷ್ಟೇ ಅವಕಾಶ ಎಂದು ಆದೇಶ ಹೊರಡಿಸಿದ್ದರೂ, ದೀಪಾವಳಿಯನ್ನು ಬೆಳಕು ಚೆಲ್ಲುವ ದೀಪಗಳ ಹಬ್ಬವನ್ನಾಗಿಸಿ ಎಂದೇ ಸಾರ್ವಜನಿಕವಾಗಿ ಮನವಿ ಮಾಡಿಕೊಳ್ಳುತ್ತಿದೆ. ಇದು ನಿಜವೇ ಅಲ್ಲವೇ? ರಾಸಾಯನಿಕವಾಗಲಿ, ಹಸಿರು ಪಟಾಕಿಯಾಗಲಿ ಎಲ್ಲ ಪಟಾಕಿಗಳು ವಿಷವನ್ನೇ ಸಿಡಿಸುತ್ತಿವೆ. ಹೀಗಾಗಿ, ಪರಿಸರದ ಮೇಲಿನ ಮಾಲಿನ್ಯ ದಾಳಿಯನ್ನು ತಪ್ಪಿಸಲು 'ಪಟಾಕಿ ಮುಕ್ತ' ಸಂಭ್ರಮಕ್ಕೇ ಎಲ್ಲರೂ ಅಣಿಯಾಗಬೇಕಿದೆ.

ಇದು ಅಷ್ಟು ಸುಲಭದ ಮಾತಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದ್ದರೂ, ಭವಿಷ್ಯದ ಜನರಿಗೆ 'ಪರಿಸರ ಸಂಪತ್ತಿನ' ವಿಲ್ ಬರೆಯಬೇಕೆಂಬ ದಟ್ಟ ಒತ್ತಾಸೆಯಿದ್ದರೆ ಎಲ್ಲವೂ ಕಾರ್ಯಸಾಧುವೇ.

ದೀಪಾವಳಿಯಷ್ಟೇ ಅಲ್ಲ, ವರ್ಷದ ಎಲ್ಲ ದಿನಗಳಲ್ಲೂ ವಾತಾವರಣದ ಮೇಲೆ ಕಪ್ಪನೆಯ ಮುದ್ರೆಯೊತ್ತುವ ಬದಲು, ಹಸಿರು ಬೆಳಕಾಗಲು, ಹಸುಳೆಯ ಜೀವಕ್ಕೆ ಸ್ವಚ್ಛ ಉಸಿರಾಗಲು ಮಾಲಿನ್ಯದ ವಿರುದ್ಧ ಹುಲ್ಲು ಕಡ್ಡಿಯಾಗಿ ನಿಂತರೂ ಸಾಕು.

ಪ್ರತಿಕ್ರಿಯಿಸಿ: feedback@sudha.co.in

